# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1690
ಸದಸ್ಯರ ಹೆಸರು : ಡಾ|| ಉಮಾಶ್ರೀ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಇಲ್ಲಿಯವರೆಗೂ ಸಾರಿಗೆ ಇಲಾಖೆಯು ಎಷ್ಟು ಹೊಸ ಬಸ್‌ಗಳನ್ನು ಖರೀದಿ ಮಾಡಿದೆ; | ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮ/ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ 2023-24 ರಿಂದ 2025-26ರವರೆಗೆ ಖರೀದಿಸಿರುವ/ ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ: |

| ಸಂಸ್ಥೆಗಳು | 2023-24 (Jan) | 2024-25 | 2025-26 | ಒಟ್ಟು |
|---|---|---|---|---|
| ಕ.ರಾ.ರ.ಸಾ. ನಿಗಮ | 510 | 698 | 10+60* +45** | 1323 |
| ಬೆಂ.ಮ.ಸಾ. ಸಂಸ್ಥೆ | 20 ಡೀಸೆಲ್ | 820 ಡೀಸೆಲ್ | | 2365 |
| | 341 ಇ.ವಿ | 755 ಇ.ವಿ | 429 ಇ.ವಿ | |
| ವಾ.ಕ.ರ.ಸಾ. ಸಂಸ್ಥೆ | 296 | 560 | 11+ 354*** | 1221 |
| ಕ.ಕ.ರ.ಸಾ. ನಿಗಮ | 720 | 307 | 146 | 1173 |
| **ಒಟ್ಟು** | **1887** | **3140** | **1055** | **6082** |

* ಪ್ರಸಕ್ತ 2025-26ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 60 ನಾನ್ ಎ.ಸಿ. ಸ್ಲೀಪರ್ ಬಸ್‌ಗಳಿಗೆ ಕೇಂದ್ರ ಖರೀದಿ ಆದೇಶ ನೀಡಲಾಗಿದ್ದು, ಸದರಿ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

** ನಿಗಮಕ್ಕೆ 45 ಸಂಖ್ಯೆಯ ಕರ್ನಾಟಕ ಸಾರಿಗೆ ಮಾದರಿಯ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

***ಪ್ರಸಕ್ತ 2025-26ನೇ ಸಾಲಿನಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು 354 ಹೊಸ ಬಸ್‌ಗಳನ್ನು ಖರೀದಿಸಲು ಖರೀದಿ ಆದೇಶ ನೀಡಿದ್ದು, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

ಮುಂದುವರೆದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಮಾರ್ಚ್-2026ರ ನಂತರ ಸಾರಿಗೆ ನಿಗಮಗಳಿಗೆ ಸೇರ್ಪಡೆಗೊಳ್ಳಲಿರುವ ಒಟ್ಟು ಬಸ್‌ಗಳ ವಿವರ ಕೆಳಕಂಡಂತಿರುತ್ತದೆ:

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

| ಸಂಸ್ಥೆ/ನಿಗಮ | ಬಸ್‌ಗಳ ಸಂಖ್ಯೆ | ಬಸ್‌ಗಳ ವಿವರ |
|---|---|---|
| ಕ.ರಾ.ರ.ಸಾ.ನಿಗಮ | 644 | 500 ಗ್ರಾಮಾಂತರ+ 144 ಡಬಲ್ ಡೋರ್ (ನಗರ) |
| ವಾ.ಕ.ರ.ಸಾ.ಸಂಸ್ಥೆ | 150 | ಗ್ರಾಮಾಂತರ ಬಸ್‌ಗಳು |
| ಕ.ಕ.ರ.ಸಾ.ನಿಗಮ | 56 | ವಿವಿಧ ರೀತಿಯ ಪ್ರೀಮಿಯಂ ಬಸ್‌ಗಳು |
| **ಒಟ್ಟು** | **850** | |

2025-26ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 469(iii)ರಲ್ಲಿ ರಾಜ್ಯದ ವಿವಿಧ ಸಾರಿಗೆ ನಿಗಮಗಳಿಗೆ 2000 ಸಂಖ್ಯೆಯ ಹೊಸ ಡೀಸೆಲ್ ಬಸ್ಸುಗಳನ್ನು ಸೇರ್ಪಡೆಗೊಳಿಸಲಾಗುವುದು ಎಂದು ಘೋಷಿಸಿದ್ದು, ಅದರನ್ವಯ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 900, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 700 ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400ರಂತೆ, ಒಟ್ಟು 2000 ಸಂಖ್ಯೆಯ ಹೊಸ ಬಿ.ಎಸ್-VI ಡೀಸೆಲ್ ಬಸ್ಸುಗಳನ್ನು ಹಂಚಿಕೆ ಮಾಡಲಾಗಿದೆ.

ಅದರಲ್ಲಿ ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 500 ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 150 ಸಂಖ್ಯೆಯ ಪೂರ್ಣ ನಿರ್ಮಿತ ಬಿ.ಎಸ್-VI ಕರ್ನಾಟಕ Mofussil ಸಾರಿಗೆ ಬಸ್ಸುಗಳನ್ನು ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 33 ಟಿಸಿಬಿ 2025, ದಿನಾಂಕ: 30.01.2026ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕುರಿತು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಉಳಿದ 620 ಬಸ್ಸುಗಳಿಗೆ ಅನುದಾನ ನೀಡುವಂತೆ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಬಸ್ಸುಗಳ ಖರೀದಿಗೆ ಅನುದಾನ ಮಂಜೂರಾತಿ ಕೋರಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ನಿರೀಕ್ಷಿಸಲಾಗಿದೆ.

ಕೇಂದ್ರ ಸರ್ಕಾರದ PM e-sewa ಯೋಜನೆಯಡಿಯಲ್ಲಿ ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಿಗೆ ಒಟ್ಟು 750 ವಿದ್ಯುತ್ ಚಾಲಿತ ಬಸ್ಸುಗಳು ಮತ್ತು PM e-drive ಯೋಜನೆಯಡಿ ಬೆಂ.ಮ.ಸಾ.ಸಂಸ್ಥೆಗೆ 4500 ವಿದ್ಯುತ್ ಚಾಲಿತ ಬಸ್ಸುಗಳನ್ನು GCC ಮಾದರಿಯಲಿ ಆಚರಣೆ ಮಾಡಲು ಮಂಜೂರಾತಿ ದೊರೆತಿದ್ದು, ಮುಂದಿನ ದಿನಗಳಲ್ಲಿ ಸೇರ್ಪಡೆಗೊಳಿಸಲು ಯೋಜಿಸಲಾಗಿರುತ್ತದೆ.

2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 480 ರಲ್ಲಿ ನಾಲ್ಕು ಸಾರಿಗೆ ನಿಗಮಗಳಿಗೆ 1000 ಡೀಸೆಲ್ ಬಸ್‌ಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ.</td><td>ಪ್ರಸ್ತುತ 4 ಸಾರಿಗೆ ನಿಗಮಗಳಲ್ಲಿ ಇರುವ ಬಸ್‌ಗಳ ಸಂಖ್ಯೆ ಎಷ್ಟು ಹಾಗೂ ನಿಗಮಕ್ಕೆ ಎಷ್ಟು ಆದಾಯ ಬಂದಿದೆ;</td><td>ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿರುವ ಬಸ್‌ಗಳ ವಿವರ ಕೆಳಕಂಡಂತಿದೆ:-<br>
<table>
<tr><th>ನಿಗಮ/ ಸಂಸ್ಥೆ</th><th>ಬಸ್‌ಗಳ ಸಂಖ್ಯೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>8560</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>6971</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>5311</td></tr>
<tr><td>ಕ.ಕ.ರ.ಸಾ.ನಿಗಮ</td><td>4993</td></tr>
<tr><td>ಒಟ್ಟು</td><td>25835</td></tr>
</table>
ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆ/ ನಿಗಮಗಳಲ್ಲಿ ಕಳೆದ 5 ವರ್ಷಗಳ ಆದಾಯದ ವಿವರ ಕೆಳಕಂಡಂತಿದೆ:-<br>
(ರೂ. ಕೋಟಿಗಳಲ್ಲಿ)
<table>
<tr><th colspan="2">ಕ.ರಾ.ರ.ಸಾ.ನಿಗಮ</th><th colspan="2">ವಾ.ಕ.ರ.ಸಾ.ಸಂಸ್ಥೆ</th></tr>
<tr><th>ವರ್ಷ</th><th>ಆದಾಯ</th><th>ವರ್ಷ</th><th>ಆದಾಯ</th></tr>
<tr><td>2020-21</td><td>2271.91</td><td>2020-21</td><td>1282.47</td></tr>
<tr><td>2021-22</td><td>2859.09</td><td>2021-22</td><td>1471.61</td></tr>
<tr><td>2022-23</td><td>4573.68</td><td>2022-23</td><td>2845.92</td></tr>
<tr><td>2023-24</td><td>4544.41</td><td>2023-24</td><td>2372.91</td></tr>
<tr><td>2024-25</td><td>5406.38</td><td>2024-25</td><td>2805.66</td></tr>
<tr><th colspan="2">ಬೆಂ.ಮ.ಸಾ.ಸಂಸ್ಥೆ</th><th colspan="2">ಕ.ಕ.ರ.ಸಾ.ನಿಗಮ</th></tr>
<tr><td>2020-21</td><td>1853.06</td><td>2020-21</td><td>1281.42</td></tr>
<tr><td>2021-22</td><td>2115.12</td><td>2021-22</td><td>1467.90</td></tr>
<tr><td>2022-23</td><td>2937.66</td><td>2022-23</td><td>2239.98</td></tr>
<tr><td>2023-24</td><td>2613.80</td><td>2023-24</td><td>2291.85</td></tr>
<tr><td>2024-25</td><td>2768.27</td><td>2024-25</td><td>2772.71</td></tr>
</table></td></tr>
<tr><td>ಇ.</td><td>ಸರ್ಕಾರ ಖಾಸಗಿ ಬಸ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಸಾರ್ವಜನಿಕ ಸೇವೆಗೆ ಒದಗಿಸಲು ಆಲೋಚಿಸಿದೆಯೇ;</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ PM e-Bus SEWA ಯೋಜನೆಯಡಿ ಮಂಜೂರಾದ ಒಟ್ಟು 750 ಸಂಖ್ಯೆಯ ವಿದ್ಯುತ್ ಬಸ್ಸುಗಳನ್ನು ತನ್ನ ವ್ಯಾಪ್ತಿಯಲ್ಲಿ ಬರುವ ನಗರಗಳಲ್ಲಿ GCC (Gross Cost Contract) ಆಧಾರದಲ್ಲಿ ಕಾರ್ಯಾಚರಣೆಗೊಳಿಸಲು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.<br>
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು 2025-26ನೇ ಸಾಲಿನಲ್ಲಿ PM E-Drive ಯೋಜನೆಯಡಿಯಲ್ಲಿ ಜಿಸಿಸಿ ಆಧಾರದ ಮೇಲೆ ಆಚರಣೆ ಮಾಡಲು 4500 ಸಂಖ್ಯೆಯ ಎಲೆಕ್ಟ್ರಿಕ್ ಬಸ್ಸುಗಳಿಗೆ ಬೇಡಿಕೆ ಸಲ್ಲಿಸಿರುತ್ತದೆ. ಸದರಿ ಬಸ್ಸುಗಳಿಗೆ ಮೆ|| CESL ರವರು ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.</td></tr>
<tr><td>ಈ.</td><td>ಪ್ರಸ್ತುತ ಇರುವ ಬಸ್ ಮಾರ್ಗಗಳಲ್ಲಿ ಶೇಕಡಾ ಎಷ್ಟು ಮಾರ್ಗಗಳು ನಷ್ಟದಲ್ಲಿದೆ; ಎಷ್ಟು ಮಾರ್ಗಗಳಿಂದ ಆದಾಯ ಬರುತ್ತಿದೆ;</td><td>ನಾಲ್ಕು ಸಾರಿಗೆ ಸಂಸ್ಥೆಗಳ ಪ್ರಸ್ತುತ ಇರುವ ಬಸ್ ಮಾರ್ಗಗಳ ನಷ್ಟ ಮತ್ತು ಆದಾಯದ ವಿವರ ಕೆಳಕಂಡಂತಿದೆ:-
<table>
<tr><th>ನಿಗಮ/ ಸಂಸ್ಥೆ</th><th>ಶೇಕಡವಾರು ನಷ್ಟದಲ್ಲಿರುವ ಮಾರ್ಗ (ಅನುಸೂಚಿ)</th><th>ಆದಾಯದ ಮಾರ್ಗ (ಅನುಸೂಚಿ)</th></tr>
<tr><td>ಕ.ರಾ.ರ.ಸಾ.ನಿಗಮ</td><td>46.10</td><td>4445</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>91.2</td><td>551</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>52.85</td><td>2334</td></tr>
<tr><td>ಕ.ಕ.ರ.ಸಾ.ನಿಗಮ</td><td>56.10</td><td>2070</td></tr>
</table></td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಉ. | ಕಳೆದ 3 ವರ್ಷದ ಅವಧಿಯಲ್ಲಿ 4 ಸಾರಿಗೆ ನಿಗಮ ಮತ್ತು ಬಿ.ಎಂ.ಟಿ.ಸಿ ಬಸ್‌ಗಳಲ್ಲಿ ಪ್ರಯಾಣ ಮಾಡಿರುವ ಪ್ರಯಾಣಿಕರ ಸಂಖ್ಯೆ ಎಷ್ಟು? | ನಾಲ್ಕು ಸಾರಿಗೆ ಸಂಸ್ಥೆ/ ನಿಗಮಗಳಲ್ಲಿ ಕಳೆದ 3 ವರ್ಷದ ಅವಧಿಯಲ್ಲಿ ಪ್ರಯಾಣಿಸಿದ ಒಟ್ಟು ಪ್ರಯಾಣಿಕರ ವಿವರ ಈ ಕೆಳಕಂಡಂತಿದೆ:- |

**(ಕೋಟಿಗಳಲ್ಲಿ)**

| ಕ.ರಾ.ರ.ಸಾ.ನಿಗಮ | | ವಾ.ಕ.ರ.ಸಾ.ಸಂಸ್ಥೆ | |
|---|---|---|---|
| ವರ್ಷ | ಪ್ರಯಾಣಿಕರ ಸಂಖ್ಯೆ | ವರ್ಷ | ಪ್ರಯಾಣಿಕರ ಸಂಖ್ಯೆ |
| 2022-23 | 108.48 | 2022-23 | 61.83 |
| 2023-24 | 120.34 | 2023-24 | 81.50 |
| 2024-25 | 125.16 | 2024-25 | 89.32 |
| **ಬೆಂ.ಮ.ಸಾ.ಸಂಸ್ಥೆ** | | **ಕ.ಕ.ರ.ಸಾ.ನಿಗಮ** | |
| 2022-23 | 99.79 | 2022-23 | 43.22 |
| 2023-24 | 139.89 | 2023-24 | 60.50 |
| 2024-25 | 146.88 | 2024-25 | 64.24 |

ಸಂಖ್ಯೆ: ಟಿಡಿ 93 ಟಿಸಿಕ್ಯೂ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು